**OS. No.18/2016**
**D.W-1**

**( ದಿನಾಂಕ.23-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ.G.A.D. ವಕೀಲರಿಂದ

ವಾದಿಯರು ಹಣಮಂತರಾಯ ದೇಶಮುಖರವರ ಮಕ್ಕಳು ಇರುತ್ತಾರೆ ಎಂದರೆ ಸರಿ. ಹಣಮಂತರಾಯ 2011 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. 1 ನೇ ವಾದಿಯ ಮದುವೆ ಯಾವತ್ತು ಆಗಿದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ 2 ನೇ ವಾದಿಯ ಮದುವೆ ಯವತ್ತು ಆಗಿದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ 3 ರಿಂದ 7 ನೇ ವಾದಿಯರ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. 1 ನೇ ವಾದಿ ಸುಮಾರು 20 ವರ್ಷಗಳಿಂದ ಪುನಾದಲ್ಲಿ ಇರುತ್ತಾರೆಂದರೆ ಸರಿ. 2 ನೇ ವಾದಿ ಸುಮಾರು 20-30 ವರ್ಷಗಳಿಂದ ಕಲಬುರುಗಿಯಲ್ಲಿ ಇರುತ್ತಾರೆಂದರೆ ಗೊತ್ತಿಲ್ಲ. 3 ನೇ ವಾದಿ ಸುಮಾರು 10-15 ವರ್ಷಗಳಿಂದ ಕಲಬುರುಗಿಯಲ್ಲಿ ಇರುತ್ತಾರೆಂದರೆ ನನಗೆ ಗೊತ್ತಿಲ್ಲ. 4,6 ಮತ್ತು 7 ನೇ ವಾದಿಯರು ಮದುವೆಯಾದ ನಂತರ ಕಲಬುರುಗಿಯಲ್ಲಿ ವಾಸವಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ವಾದಿಯರ ಮದುವೆಯಾಗಿ ಸುಮಾರು 25 ವರ್ಷಗಳ ಮೇಲೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಗಂಡ ಪಾಂಡುರಂಗರಾವರ ಮದುವೆ ಯಾವಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಚಂದನನ ವಯಸ್ಸು ಈಗ 28 ಎಂದರೆ ಸರಿ. 3 ನೇ ಪ್ರತಿವಾದಿ ವಯಸ್ಸು 25 ಇರುತ್ತದೆ ಎಂದರೆ ಸರಿ.

ನಾನು ಮತ್ತು 5,6 ನೇ ಪ್ರತಿವಾದಿಯರು ಬೇರೆ ಬೇರೆಯಾಗಿ ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆ. ವಾದಿಯರು 5 ನೇ ಪ್ರತಿವಾದಿ ಮೇಲೆ ಯಾಕೆ ದಾವೆ ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ವಾದಿಯರು 6 ನೇ ಪ್ರತಿವಾದಿ ಮೇಲೆ ಯಾಕೆ ದಾವೆ ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿ ಗಂಡ ಪಾಂಡುರಂಗರಾವ 2016 ರಲ್ಲಿ ಮರಣ ಹೊಂದಿರುತ್ತಾರೆಂದರೆ ಸರಿ. ಪಾಂಡುರಂಗರಾವ ಮತ್ತು 6 ನೇ ಪ್ರತಿವಾದಿ ನಡುವೆ ಆದ ವ್ಯವಹಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಹಣಮಂತರಾವ ತಂದೆ ಪಾಂಡುರಂಗರಾವ ದೇಶಮುಖರವರಿಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಹಣಮಂತರಾವ ತಂದೆ ಪಾಂಡುರಂಗರಾರವರು ಕಮಲಾಕರ ತಂದೆ ಶಿವಲಿಂಗಪ್ಪರವರಿಗೆ ಎಷ್ಟು ಜಮೀನನ್ನು ಮಾರಿರುತ್ತಾರೆ ಹಾಗೂ ಯಾವಾಗ ಮಾರಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ. ಯಾವ ಸರ್ವೇ ನಂಬರದಲ್ಲಿ ಮಾರಿರುತ್ತಾರೆಂದರೆ ಕೂಡಾ ನನಗೆ ಮಾಹಿತಿ ಇಲ್ಲ. ಹಣಮಂತರಾವ ತಂದೆ ಪಾಂಡುರಂಗರಾರವರು ಅಂಬಾರಾಯ ತಂದೆ ಶಿವಲಿಂಗಪ್ಪರವರಿಗೆ ಎಷ್ಟು ಜಮೀನನ್ನು ಹಾಗೂ ಯಾವಾಗ ಮಾರಿರುತ್ತಾರೆಂದು ನನಗೆ ಗೊತ್ತಿಲ್ಲ. ಯಾವ ಸರ್ವೇ ನಂಬರದಲ್ಲಿ ಮಾರಿರುತ್ತಾರೆಂದರೆ ಕೂಡಾ ನನಗೆ ಮಾಹಿತಿ ಇಲ್ಲ.

**OS. No.18/2016**
**D.W-1**

ಅಹ್ಮದ ಅಲಿ ತಂದೆ ಮಕದುಬ್ ಶೇಖ್ ರವರಿಗೆ ಹಣಮಂತರಾವ ತಂದೆ ಪಾಂಡುರಂಗರಾವರು ಎಷ್ಟು ಆಸ್ತಿ ಮಾರಿರುತ್ತಾರೆ ಮತ್ತು ಯಾವಾಗ ಮಾರಿರುತ್ತಾರೆ ನನಗೆ ಗೊತ್ತಿಲ್ಲ. ಅದೇ ರೀತಿ ಅಹ್ಮದ ಅಲಿಗೆ ಯಾವ ಸ್ವಶೇ ನಂಬರದಲ್ಲಿ ಮಾರಾಟ ಮಾಡಿರುತ್ತಾರೆ ಕೂಡಾ ಗೊತ್ತಿಲ್ಲ.

ಹಣಮಂತರಾವ ತಂದೆ ಪಾಂಡುರಂಗರಾವರು ಗುರುನಾಥ ರೆಡ್ಡಿಗೆ ಎಷ್ಟು ಆಸ್ತಿ ಮಾರಿರುತ್ತಾರೆ ಮತ್ತು ಯಾವಾಗ ಮಾರಿರುತ್ತಾರೆ ನನಗೆ ಗೊತ್ತಿಲ್ಲ. ಅದೇ ರೀತಿ ಯಾವ ಸರ್ವೆ ನಂಬರದಲ್ಲಿ ಮಾರಾಟ ಮಾಡಿರುತ್ತಾರೆ ಕೂಡಾ ಗೊತ್ತಿಲ್ಲ. ಸದರಿ ಹಣಮಂತರಾವ ತಂದೆ ಪಾಂಡುರಂಗರಾವರು ಗುರುಬಾಯಿ ಗಂಡ ಶಿವಶರಣಪ್ಪರವರಿಗೆ ಎಷ್ಟು ಆಸ್ತಿ ಮಾರಿರುತ್ತಾರೆ ಮತ್ತು ಯಾವಾಗ ಮಾರಿರುತ್ತಾರೆ ಎಂದು ಕೂಡಾ ನನಗೆ ಗೊತ್ತಿಲ್ಲ. ಅದೇ ರೀತಿ ಯಾವ ಸರ್ವೆ ನಂಬರದಲ್ಲಿ ಮಾರಾಟ ಮಾಡಿರುತ್ತಾರೆ ಕೂಡಾ ಗೊತ್ತಿಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹಣಮಂತರಾವ ತಂದೆ ಪಾಂಡುರಂಗರಾವರವರಿಗೆ 80 ಎಕರೆ ಜಮೀನು ಇತ್ತು ಎಂದು ಹೇಳಿ ಬರೆಸಿದ್ದು ಅದನ್ನು ಯಾವ ಆಧಾರದ ಮೇಲೆ ಹೇಳಿ ಬರೆಸಿರುತ್ತಿರಿ ಎಂದರೆ ಸಾಕ್ಷಿ ಜನರು ಹೇಳುತ್ತಿದ್ದರು ಆ ಕಾರಣ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವೆಯಲ್ಲಿ ತಹಶೀಲ್ದಾರ ಕಚೇರಿಗೆ ಹೋಗಿ ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

**OS. No.18/2016**
**D.W-1**

ನಿಡಿ-8 ರಂತೆ ಹಣಮಂತರಾವರವರಿಗೆ ದಿಃ23-06-2007 ಕ್ಕೆ ಸರ್ವೇ ನಂಬರ 7,8 ಮತ್ತು 131 ರ ಜಮೀನುಗಳು ಮಾತ್ರ ಇದ್ದವು ಎಂದರೆ ಸರಿ. 2007 ರಲ್ಲಿ ಹಣಮಂತರಾವರಿಗೆ ಮೇಲೆ ಹೇಳಿದ ಮೂರು ಜಮೀನುಗಳನ್ನು ಹೊರತುಪಡಿಸಿ ಬೇರೆ ಜಮೀನು ಇರಲಿಲ್ಲ ಎಂದರೆ ಸರಿ. ನಾನು ಖರೀದಿಸಿದ ಜಮೀನು 14 ಎಕರೆ 10 ಗುಂಟೆ ಇದೆ ಎಂದರೆ ಸರಿ. ಸರ್ವೇ ನಂಬರ 8 ರ ಜಮೀನು 5 ಎಕರೆ 9 ಗುಂಟೆ ಇದೆ ಎಂದರೆ ಸರಿ. ಸರ್ವೇ ನಂಬರ 131 ರ ಜಮೀನು 8 ಎಕರೆ 37 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ.

ನಿಡಿ-8 ರ ದಾಖಲಾತಿ ಪ್ರಕಾರ ವಾಟನಿ ತಂದೆ-ಮಕ್ಕಳ ನಡುವೆ ಅಂದರೆ ಹಣಮಂತರಾವ ಮತ್ತು ಆತನ ಮಗ ಪಾಂಡುರಂಗರವರ ನಡುವೆ ಆಗಿರಬಹುದು, ಆದರೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ನಾನು ಸದರಿ ವಾಟನಿ ಪತ್ರವನ್ನು ನೋಡಿರುವುದಿಲ್ಲ. ಸದರಿ ವಾಟನಿ ಪತ್ರ ಯಾವ ದಿನಾಂಕಕ್ಕೆ ಆಗಿದೆ ನನಗೆ ಗೊತ್ತಿಲ್ಲ. ಸದರಿ ವಾಟನಿ ಪತ್ರ ಆಗುವ ಕಾಲಕ್ಕೆ ಯಾರ್ಯಾರು ಸಾಕ್ಷಿದಾರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಿಡಿ-8 ರಂತೆ ನನ್ನ ಪ್ರಕಾರ ಹಣಮಂತರಾವ ಮತ್ತು ಆತನ ಮಗ ಪಾಂಡುರಂಗರವರವರಿಗೂ ಎಷ್ಟೆಷ್ಟು ಜಮೀನು ಹೋಯಿತು ನನಗೆ ನಿಖರವಾಗಿ ಮಾಹಿತಿ ಇಲ್ಲ.

ಅದೇ ರೀತಿ ಸದರಿ ವಾಟನಿ ಪತ್ರ ಪ್ರಕಾರ ವಾದಿಯರಿಗೆ ಎಷ್ಟೆಷ್ಟು ಭಾಗ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 7,8 ಮತ್ತು 131 ರ ಜಮೀನುಗಳು 2007 ರ ವರೆಗೆ ವಾದಿಯರ ತಂದೆಯಾದ ಹಣಮಂತರಾವ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನಿಡಿ-8 ರಲ್ಲಿ ವಾದಿಯರಿಗೆ ಮತ್ತು ಹಣಮಂತರಾವರವರಿಗೆ ಯಾವುದೇ ಭಾಗ ಹೋಗಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ವಿಷಯದ ಬಗ್ಗೆ ನಾನು ನನ್ನ ವಕೀಲರಿಗೆ ಕೇಳಿಲ್ಲ ಎಂದರೆ ಸರಿ. ಅದೇ ರೀತಿ ನಿಡಿ-8 ರಲ್ಲಿ ಏನು ಬರೆದಿದೆ ನನಗೆ ಮಾಹಿತಿ ಇಲ್ಲ.

ನಿಡಿ-8 ರಲ್ಲಿ ಹಣಮಂತರಾವ ತನಗೆ ವಯಸ್ಸಾಗಿದ್ದರಿಂದ ಅದರಲ್ಲಿ ಕಾಣಿಸಿದ ಅಸ್ತಿಗಳು ತನ್ನ ಮಗನಿಗೆ ಹೋಗಲ್ಲಿ ಎಂದು ಬರೆಸಿರುತ್ತಾನೆಂದರೆ ಇರಬಹುದು, ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-8 ರಲ್ಲಿ ವಾದಿಯರ ಯಾರದ್ದು ಸಹಿ ಇಲ್ಲ ಎಂದರೆ ಸರಿ. ನಿಡಿ-9 ರಂತೆ ಹಣಮಂತರಾವರವರು ತನ್ನ ಮಗನಾದ ಪಾಂಡುರಂಗರಾವರಿಗೆ ತನ್ನ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳುನ್ನು ಬಿಟ್ಟುಕೊಟ್ಟಿರುತ್ತೇನೆಂದು ಅದರಲ್ಲಿ ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಡಿ-9 ರ ಕಾಗದ ಯಾರ ಸಮುಖದಲ್ಲಿ ಆಗಿದೆ ಹಾಗೂ ಆ ದಾಖಲೆ ಆಗುವ ಕಾಲದಲ್ಲಿ ಯಾರ್ಯಾರು ಇದ್ದರು ಎಂದರೆ ನನಗೆ ಮಾಹಿತಿ ಇಲ್ಲ. ನಿಡಿ-8 ಮತ್ತು 9 ರ ದಾಖಲೆ ವಾಟನಿ ಪತ್ರ ಅಲ್ಲ ಎಂದರೆ ಸರಿಯಲ್ಲ. ಸದರಿ ನಿಡಿ-8 ಮತ್ತು 9 ರ ದಾಖಲೆ ವಾಟನಿ ಪತ್ರದ ದಾಖಲೆ ಇರುತ್ತದೆ ಎಂದು ನಾನು ಹಾಕಿರುತ್ತೇನೆ.

**OS. No.18/2016**
**D.W-1**

ಹಣಮಂತರಾವಗಾಗಲೀ ಹಾಗೂ ಆತನ ಮಗನಾದ ಪಾಂಡುರಂಗರಾವರಗಾಗಲೀ ನಿಡಿ-8 ಮತ್ತು 9 ನ್ನು ಮಾಡಿಕೊಳ್ಳುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಎಲ್ಲವು ಹಣಮಂತರಾವರರಿಗೆ ಅವರ ತಂದೆಯಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ನಾನು ಕ್ರಯಕ್ಕೆ ಪಡೆದಂತ ಸರ್ವೇ ನಂಬರ 7,8 ಮತ್ತು 131 ರ ಜಮೀನುಗಳು ಹಣಮಂತರಾವ ತಂದೆ ಪಾಂಡುರಂಗರಾವವರಿಗೆ ಅವರ ತಂದೆಯಿಂದ ಬಂದಂತಹ ಜಮೀನುಗಳಾಗಿರುತ್ತವೆ ಎಂದರೆ ಸರಿ.

ಹಣಮಂತರಾವ ತಂದೆ ಪಾಂಡುರಂಗರಾವ ಜೀವಂತವಿದ್ದಾಗ ವಾದಿಯರ ನಡುವೆ ಆಗಲಿ 1 ನೇ ಪ್ರತಿವಾದಿ ಗಂಡ ಪಾಂಡುರಂಗರವರ ನಡುವೆ ಆಗಲಿ ವಾಟನಿ ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ಸಾಕ್ಷಿ ಮುಂದುವರೆದು ನಾನು ಕೊಂಡುಕೊಳ್ಳುವ ಕಾಲಕ್ಕೆ ವಾಟನಿ ಆದ ಬಗ್ಗೆ ಕೇಳಿ ಕೊಂಡುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಯಾರ ನಡುವೆ ವಾಟನಿ ಆಗಿರುತ್ತದೆ ಎಂದು ಕೇಳಿರುತ್ತಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತಂದೆ ಮಗನ ನಡುವೆ ಆಗಿರುತ್ತದೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತುಗಳಲ್ಲಿ ಹಣಮಂತರಾವ ವಾದಿಯರಿಗೆ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಹಣಮಂತರಾವ ಮರಣ ಹೊಂದಿದ ನಂತರ 1 ನೇ ಪ್ರತಿವಾದಿ ಗಂಡ ಪಾಂಡುರಂಗರಾವರವರ ನಡುವೆ ಹಾಗೂ ವಾದಿಯರ

**OS. No.18/2016**
**D.W-1**

ನಡುವೆ ಯಾವುದೇ ವಾಟನಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 7 ರಲ್ಲಿ ಬಾವಿ ಇರುತ್ತದೆ. ಸರ್ವೇ ನಂಬರ 7 ರಲ್ಲಿ ಕೊಳವೆ ಬಾವಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 7 ರಲ್ಲಿರುವ ಬಾವಿಯಿಂದ ಸಂಪೂರ್ಣ ಜಮೀನಿಗೆ ನೀರು ಸಾಕಾಗುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಎಷ್ಟು ಎಕರೆಗೆ ಸದರಿ ಬಾವಿಯ ನೀರು ಸಾಕಾಗುತ್ತದೆ ನನಗೆ ಗೊತ್ತಾಗುವುದಿಲ್ಲ.

ಸರ್ವೇ ನಂಬರ 7 ರಲ್ಲಿ ನಾನು ಖರೀದಿಸುವ ಮುಂಚೇನೆ ಕಬ್ಬು, ಬಾಳೆ ಹಾಗೂ ಎಲೆತೋಟ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 7 ರ ಜಮೀನು ಕಪ್ಪು ಮತ್ತು ಕೆಂಪು ಭೂಮಿಯಾಗಿರುತ್ತದೆ. ಸರ್ವೇ ನಂಬರ 7 ರ ಜಮೀನು ನೀರಾವರಿ ಜಮೀನು ಆಗಿರುತ್ತದೆ ಎಂದರೆ ಸರಿ. ನಿಡಿ-2 ರಂತೆ ನಾನು ದಾವಾ ಸ್ವತ್ತನ್ನು ಖರೀದಿಸುವಾಗ ಯಾವುದೇ ನೀರಾವರಿ ಸೌಕರ್ಯ ಇಲ್ಲ ಹಾಗೂ ಸಾದಾ ಭೂಮಿ ಎಂದು ಖರೀದಿಸಿರುತ್ತೇನೆಂದರೆ ಇರಬಹುದು. ನಿಡಿ-2 ರಲ್ಲಿ ದಾವಾ ಸ್ವತ್ತು ನೀರಾವರಿ ಸೌಲಭ್ಯ ಇದ್ದರೂ ಕುಡಾ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಪ್ರತಿವಾದಪತ್ರದಲ್ಲಿ ಒಕ್ಕಲುತನ ಮಾಡುತ್ತೇನೆಂದು ಬರೆಸಿರುತ್ತೇನೆಂದರೆ ಸರಿ. ಸುಮಾರು 10 ವರ್ಷಗಳ ಹಿಂದೆ ನನ್ನ ಹೆಸರಿನಲ್ಲಿ ನಾಲ್ಕುವರೆ ಜಮೀನು ಇತ್ತು. 2013 ಕ್ಕಿಂತ ಮುಂಚೆ ನನ್ನ ಹೆಸರಿನಲ್ಲಿ ಬರೆ ನಾಲ್ಕುವರೆ ಜಮೀನು ಇತ್ತು ಎಂದರೆ ಸರಿ.

ಸದರಿ ನಾಲ್ಕುವರೆ ಜಮೀನು ನೀರಾವರಿ ಜಮೀನು ಅಲ್ಲ ಎಂದರೆ ಸರಿಯಲ್ಲ. ನಾಲ್ಕುವರೆ ಎಕರೆ ಜಮೀನು ನೀರಾವರಿ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಾಲ್ಕುವರೆ ಎಕರೆ ಜಮೀನು ಒಣಬೇಸಾಯ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನಾಲ್ಕುವರೆ ಎಕರೆ ಜಮೀನಿನಿಂದ ವರ್ಷಕ್ಕೆ ಎಲ್ಲಾ ಖರ್ಚುನ್ನು ಕಳೆದು ಸುಮಾರು 20-30 ಸಾವಿರ ಆದಾಯ ಬರುತ್ತದೆ ಎಂದರೆ ಸರಿ. ಸದರಿ ಆದಾಯ ನಮ್ಮ ಕುಟುಂಬಕ್ಕೆ ಸರಿ ಹೋಗುತ್ತದೆ ಎಂದರೆ ನಿಜ.

ನನ್ನ ಹೆಸರಿನಲ್ಲಿ ಆಳಂದ ಮತ್ತು ಕಡಗಂಚಿಯಲ್ಲಿ ಬ್ಯಾಂಕ ಖಾತೆಗಳಿರುತ್ತವೆ. ಕಡಗಂಚಿಯಲ್ಲಿ ಸುಮಾರು 10-12 ವರ್ಷಗಳಿಂದ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತೇನೆ. ಆಳಂದದಲ್ಲಿ ಸುಮಾರು 08-10 ವರ್ಷಗಳಿಂದ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತೇನೆ. ನಾನು ಕಡಗಂಚಿ ಬ್ಯಾಂಕನಲ್ಲಿ ವರ್ಷಕ್ಕೆ 60-70 ಸಾವಿರ ವ್ಯವಹಾರ ಮಾಡುತ್ತೇನೆ ಎಂದರೆ ಸಾಕ್ಷಿ ಹೆಚ್ಚಿಗೆ ಆಗುತ್ತದೆ ಎಂದು ನುಡಿಯುತ್ತಾರೆ. ನಾನು ಆಳಂದ ಬ್ಯಾಂಕನಲ್ಲಿ ವರ್ಷಕ್ಕೆ 50-60 ಸಾವಿರ ವ್ಯವಹಾರ ಮಾಡುತ್ತೇನೆ ಎಂದರೆ ಸಾಕ್ಷಿ ಹೆಚ್ಚು ಕಡಿಮೆ ಆಗುತ್ತದೆ ಎಂದು ನುಡಿಯುತ್ತಾರೆ.

**OS. No.18/2016**
**D.W-1**

2010 ರಲ್ಲಿ ನನ್ನ ಹತ್ತಿರ 11 ಲಕ್ಷ ಹಣ ಇತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ನಿಡಿ-5 ರಂತೆ 11 ಲಕ್ಷ ಕೊಟ್ಟಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದಪತ್ರದಲ್ಲಿ ವಾದಿಯರ ತಂದೆಯಾದ ಹಣಮಂತರಾವ ಮತ್ತು ಆತನ ಮಗನಾದ ಪಾಂಡುರಂಗರಾವರಿಗೆ ಸಾಕಷ್ಟು ಸಾಲ ಇತ್ತು ಎಂದು ನಾನು ಹೇಳಿ ಬರೆಸಿರುತ್ತೇನೆ. ಪಾಂಡುರಂಗರಾಮಎ 6 ನೇ ಪ್ರತಿವಾದಿಯಿಂದ ಸಾಲ ತೆಗೆದುಕೊಂಡಿದ್ದರು. ಹಣಮಂತರಾವರು ನೆಲ್ಲೂರ ಗ್ರಾಮದಲ್ಲಿ ಎಷ್ಟು ಜನರಿಂದ ಸಾಲ ಪಡೆದುಕೊಂಡಿದ್ದರು ನನಗೆ ಗೊತ್ತಿಲ್ಲ. ಧನ್ನೂರ ಗ್ರಾಮದಲ್ಲಿ ಹಣಮಂತರಾವರು ಎಷ್ಟು ಜನರಿಂದ ಸಾಲ ಪಡೆದಿದ್ದರು ಗೊತ್ತಿಲ್ಲ. ಧನ್ನೂರ ಮತ್ತು ನೆಲ್ಲೂರ ಗ್ರಾಮವನ್ನು ಹೊರತುಪಡಿಸಿ ಹಣಮಂತರಾವರು ಬೇರೆ ಗ್ರಾಮಸ್ಥರಿಂದ ಎಷ್ಟು ಸಾಲ ಪಡೆದುಕೊಂಡಿದ್ದರು ನನಗೆ ಗೊತ್ತಿಲ್ಲ.

ನಮ್ಮ ಊರಿನಲ್ಲಿ ನನ್ನ ಹತ್ತಿರ ಹಾಗೂ 6 ನೇ ಪ್ರತಿವಾದಿಯರ ಹತ್ತಿರ ಹೊರತುಪಡಿಸಿ ಪಾಂಡುರಂಗರವರು ಬೇರೆಯವರ ಹತ್ತಿರ ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಧನ್ನೂರ ಗ್ರಾಮದಲ್ಲಿ ಪಾಂಡುರಂಗರವರು ಸಾಲ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಪಾಂಡುರಂಗರಾವರು ಬೇರೆ ಸುತ್ತಮುತ್ತ ಹಳ್ಳಿಗಳಿಂದ ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಹಣಮಂತರಾವ ಮತ್ತು ಪಾಂಡುರಂಗರವರು

**OS. No.18/2016**
**D.W-1**

ಸುತ್ತ ಮುತ್ತ ಹಳ್ಳಿಯಿಂದ ಸಾಲ ಪಡೆದುಕೊಂಡಿರುತ್ತಾರೆಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿನನ್ನ  ಉಕ್ತ ಲೇಖನದಂತೆ  ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**